Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 21-02-2023

**ಪತ್ರಿಕಾ ಪ್ರಕಟಣೆ:**

# ಬಾನುಲಿಯಲ್ಲಿ ವಿ ಡಿ ಐ ಟಿ ವಿದ್ಯಾರ್ಥಿಗಳು

ಕೆ. ಎಲ್. ಎಸ್. ವಿ ಡಿ ಐ ಟಿ ಯ ವಿದ್ಯಾರ್ಥಿಗಳು ಕಾರವಾರದ ಆಲ್ ಇಂಡಿಯಾ ರೇಡಿಯೋ ಬಾನುಲಿ ಕೇಂದ್ರವು ಆಯೋಜಿಸಿದ್ದ ಯುವ ವಾಣಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಯುವ ಸಾಧಕರಿಗಾಗಿ ಕಾರವಾರದ ಬಾನುಲಿ ಕೇಂದ್ರವು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಪರಿಣಿತಿ ಪಡೆದಿರುವ ಕುಮಾರಿ. ಸೃಷ್ಟಿ ಸುಗತೆ, ಕರ್ನಾಟಕ ಅರಣ್ಯ ಇಲಾಖೆಯಿಂದ ಮಾನ್ಯತೆ ಪಡೆದ ಉರಗ ತಜ್ಞ ಕು. ಸೌರಭ ಸಬ್ನೀಸ್, ವಿವಿಧ ಮಟ್ಟದ ಭಾಷಣ ಸ್ಪರ್ಧೆಗಳಲ್ಲಿ ವಿಜಯಶಾಲಿಯಾಗಿರುವ ಕುಮಾರಿ. ಮುಸ್ಕಾನ್ ಪಠಾಣ, ರಾಷ್ಟ್ರಮಟ್ಟದ ಅಂತರ್ ಕಾಲೇಜುಗಳ ಜೂಡೋ ಮತ್ತು ಕುಸ್ತಿ ಸ್ಪರ್ಧೆಯಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿ ಯನ್ನು ಪ್ರತಿನಿಧಿಸಿದ್ದ ಕುಮಾರಿ. ವೀಣಾ ಸಿದ್ನಾಳ, ಕುಮಾರಿ. ಪ್ರತಿಕ್ಷಾ, ಕುಮಾರಿ. ಭುವನೇಶ್ವರಿ ಇವರುಗಳು ಭಾಗವಹಿಸಿದ್ದರು.ಮಹಾವಿದ್ಯಾಲಯದ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಗೈದ ಸಾಧನೆಯನ್ನು ಗುರುತಿಸಿ ಬಾನುಲಿ ಕಾರ್ಯಕ್ರಮಕ್ಕೆ ಆಹ್ವಾನಿಸಿರುವುದು ಹರ್ಷ ತಂದಿದೆ ಮತ್ತು ಆಲ್ ಇಂಡಿಯಾ ರೇಡಿಯೋ ಕಾರವಾರ ಬಾನುಲಿ ಕೇಂದ್ರಕ್ಕೆ ವಿ ಡಿ ಐ ಟಿ ಯು ಆಭಾರಿಯಾಗಿದೆ ಎಂದು ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಅವರು ಹೇಳಿದ್ದಾರೆ. ಮಹಾವಿದ್ಯಾಲಯದ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಬಾನುಲಿಯ ಯುವ ವಾಣಿಯಲ್ಲಿ ಭಾಗವಹಿಸಿದ ಯುವ ಸಾಧಕರಿಗೆ ಅಭಿನಂದನೆ ತಿಳಿಸಿದ್ದಾರೆ. ಬಾನುಲಿಯ ಯುವ ವಾಣಿ ಕಾರ್ಯಕ್ರಮವು ಫೆಬ್ರುವರಿ 21ರ ಸಂಜೆ 5ಕ್ಕೆ ಕಾರವಾರ ಕೇಂದ್ರದಿಂದ ಪ್ರಸಾರವಾಯಿತು.

ಪ್ರಾಂಶುಪಾಲರು

Principal
KLS Vishwanathrao Deshpande
Institute of Technology, Haliyal







